ಅ) ಈ ಬಗ್ಗೆ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ಇವರಿಂದ ವರದಿಯನ್ನು ಸರ್ಕಾರದಲ್ಲಿ ಸ್ವೀಕರಿಸಲಾಗಿದ್ದು, ಸದರಿ ಪ್ರಕರಣವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಲೋಕಾಯುಕ್ತದ ತನಿಖಾ ವರದಿಯ ಆಧಾರದ ಮೇರೆಗೆ ಪ್ರಕರಣದಲ್ಲಿ ಭಾಗಿಯಾಗಿರುವ ಹಿಂದಿನ ಅಧಿಕಾರಿ: ನೌಕರರ ಮೇಲೆ ವಿಚಾರಣೆ ನಡೆಸಲು ಸರ್ಕಾರದ ಆದೇಶ ದಿನಾಂಕ: 22-1-2002 ರಲ್ಲಿ ಲೋಕಾಯುಕ್ತರಿಗೆ ವಹಿಸಲಾಗಿದೆ.

ನಿಯೋಜಿತ ಬಸವನಬಾಗೇವಾಡಿ ಬಸ್ ಡಿಪೋ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 919(240)

ಸದಸ್ಯರ ಹೆಸರು: ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಪ್ರಶ್ನೆ

ಅ) ನಿಯೋಜಿತ ಬಸವನಬಾಗೇವಾಡಿ ಬಸ್ ಡಿಪೋ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಈ ಯೋಜನೆಗೆ ಬಿಡುಗಡೆಯಾದ ಹಣ ಎಷ್ಟು ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಇ) ಬಿಜಾಪುರದಿಂದ ಬೆಂಗಳೂರಿಗೆ ಬರುವ ಅಲ್ಟ್ರಾ ಡೀಲೆಕ್ಸ್ ಬಸ್ಸು ದುರಸ್ತಿಯಲ್ಲಿದ್ದು ಪ್ರಯಾಣಕರಿಗೆ ಅನಾನುಕೂಲವಾಗುತ್ತಿರುವುದರಿಂದ ಹೊಸ ಬಸ್ ಬಿಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹ್ಮದ್(ಸಾರಿಗೆ ಸಚಿವರು)

ಉತ್ತರ

ಅ) ವಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ಪಟ್ಟಣದಲ್ಲಿ ನೂತನ ಬಸ್ ಡಿಪೋ ಸ್ಥಾಪಿಸುವ ಕುರಿತಂತೆ, ಈಗಾಗಲೇ ಖಾಸಗಿ ಒಡೆತನದಲ್ಲಿರುವ 6 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಕುರಿತಂತೆ, ಭೂ ಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಈ ಸಂಬಂಧವಾಗಿ ರೂಪಾಯಿ 2,40,000-00 ಹಣವನ್ನು ಸಹ ಜಿಲ್ಲಾಧಿಕಾರಿಗಳ ಕಛೇರಿಗೆ ಜಮಾ ಮಾಡಲಾಗಿದೆ. ಭೂಪರಿವರ್ತನೆಯಾಗಿ ಜಮೀನನ್ನು ಸಂಸ್ಥೆಯ ವಶಕ್ಕೆ ಪಡೆದುಕೊಂಡ ಕೂಡಲೇ ಘಟಕ ನಿರ್ಮಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು.

ಆ) ಸಂಸ್ಥೆಯು 2001-02ನೇ ಸಾಲಿನ ಆಯವ್ಯಯದಲ್ಲಿ 65.00 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಸದರಿ ಜಮೀನನ್ನು ಸಂಸ್ಥೆಯ ವಶಕ್ಕೆ ಪಡೆದುಕೊಂಡು ನಂತರದಲ್ಲಿ ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ವಿಜಾಪುರದಿಂದ-ಬೆಂಗಳೂರಿಗೆ ಹಾಲಿ ಕಾರ್ಯಾಚರಣೆಯಲ್ಲಿರುವ ವಾಹನ ಸಂಖ್ಯೆ:ಕೆಎ28:ಎಫ್-975 ಮತ್ತು ಎಫ್-976ಗಳು ಕೇವಲ 80,000 ಕಿ.ಮೀ.ಗಳನ್ನು ಕ್ರಮಿಸಿದ್ದು ಉಳಿದ 2 ವಾಹನಗಳ ಸಂಖ್ಯೆ:ಕೆಎ-28:ಎಫ್-842, 843 ವಾಹನಗಳು 3.00 ಲಕ್ಷ ಕಿ.ಮೀ. ಕ್ರಮಿಸಿದ್ದು ಸುಸ್ಥಿತಿಯಲ್ಲಿರುತ್ತವೆ. ಆದಾಗ್ಯೂ ಹೊಸ ಬಸ್‌ನ್ನು ನಿಯುಕ್ತಿಗೊಳಿಸುವ ವಿಷಯವನ್ನು ಸೂಕ್ತ ಕಾಲದಲ್ಲಿ ಪರಿಶೀಲಿಸಲಾಗುವುದು.

ಶಿವಮೊಗ್ಗ ನಗರ ಪಾಲಿಕೆ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 920(1048)

ಸದಸ್ಯರ ಹೆಸರು: ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ(ಶಿವಮೊಗ್ಗ)

ಪ್ರಶ್ನೆ

1. ಶಿವಮೊಗ್ಗ ನಗರ ಸಭೆಯನ್ನು ಮಹಾ ನಗರ ಪಾಲಿಕೆಯನ್ನಾಗಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ? ಇದಕ್ಕೆ ಅರ್ಹತೆ ಇರುವ ಜನಗಣತಿ ಎಷ್ಟಿದೆ? (ವಿವರ ನೀಡುವುದು)

ಉತ್ತರಿಸುವ ಸಚಿವರು: ಶ್ರೀ ಬಿ.ಬಿ.ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು)

ಉತ್ತರ

1. 1976ರ ಕೆ.ಎಂ.ಸಿ. ಕಾಯ್ದೆಯಂತೆ ನಗರ ಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸಬೇಕಾದಲ್ಲಿ ಕನಿಷ್ಟ 3 ಲಕ್ಷ ಜನಸಂಖ್ಯೆ ಇರಬೇಕಾಗಿದೆ. ಆದರೆ ಶಿವಮೊಗ್ಗ ನಗರ ಸಭೆಯ ಜನಸಂಖ್ಯೆ ಹಾಲಿ ಜನಗಣತಿ ಇಲಾಖೆಯ ಮಾಹಿತಿಯಂತೆ 2,74,105 ಇರುತ್ತದೆ. ಆದುದರಿಂದ ಶಿವಮೊಗ್ಗ ನಗರ ಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸುವುದನ್ನು ಸದ್ಯಕ್ಕೆ ಪರಿಗಣಿಸಲಾಗುವುದಿಲ್ಲ

ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಹಂಚಿಕೆ.